## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 994 |
| ಉತ್ತರಿಸಬೇಕಾದ ದಿನಾಂಕ | : | 17.12.2024 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಸ್ವ-ಸಹಾಯ ಸಂಘಗಳು ನೋಂದಾವಣೆಯಾಗಿವೆ; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಡಿಸಿಸಿ ಬ್ಯಾಂಕುಗಳಲ್ಲಿ ಒಟ್ಟು 207481 ಸ್ವ-ಸಹಾಯ ಸಂಘಗಳು ಖಾತೆ ಹೊಂದಿದ್ದು, ಜಿಲ್ಲಾವಾರು ವಿವರ ಈ ಕೆಳಗಿನಂತಿದೆ. |

| ಕ್ರ.ಸಂ. | ಜಿಲ್ಲೆ | ಡಿಸಿಸಿ ಬ್ಯಾಂಕುಗಳಲ್ಲಿ ಖಾತೆ ಹೊಂದಿರುವ ಸ್ವಸಹಾಯ ಗುಂಪುಗಳ ಸಂಖ್ಯೆ |
|---|---|---|
| 1 | ಬೆಳಗಾವಿ | 28970 |
| 2 | ವಿಜಯಪುರ | 10646 |
| 3 | ಬಾಗಲಕೋಟೆ | 3826 |
| 4 | ಧಾರವಾಡ | 6072 |
| 5 | ಗದಗ | 3928 |
| 6 | ಹಾವೇರಿ | 2837 |
| 7 | ಉತ್ತರ ಕನ್ನಡ | 4139 |
| 8 | ಮೈಸೂರು | 1068 |
| 9 | ಚಾಮರಾಜನಗರ | 193 |
| 10 | ಮಂಡ್ಯ | 6867 |
| 11 | ಹಾಸನ | 18641 |
| 12 | ಚಿಕ್ಕಮಗಳೂರು | 11253 |
| 13 | ಕೊಡಗು | 7860 |
| 14 | ದಕ್ಷಿಣ ಕನ್ನಡ | 18568 |
| 15 | ಉಡುಪಿ | 15989 |
| 16 | ಬೆಂಗಳೂರ ನಗರ ಜಿಲ್ಲೆ | 1546 |
| 17 | ಬೆಂಗಳೂರು ಗ್ರಾಮಾಂತರ | 1352 |
| 18 | ರಾಮನಗರ | 3037 |
| 19 | ತುಮಕೂರು | 3660 |
| 20 | ಕೋಲಾರ | 10892 |
| 21 | ಚಿಕ್ಕಬಳ್ಳಾಪುರ | 9054 |
| 22 | ಚಿತ್ರದುರ್ಗ | 3900 |
| 23 | ದಾವಣಗೆರೆ | 1791 |
| 24 | ಶಿವಮೊಗ್ಗ | 5384 |
| 25 | ಬೀದರ್ | 9005 |
| 26 | ಕಲ್ಬುರ್ಗಿ | 6234 |

| | | | | |
|---|---|---|---|---|
| | | 27 | ಯಾದಗಿರಿ | 3177 |
| | | 28 | ರಾಯಚೂರು | 1866 |
| | | 29 | ಕೊಪ್ಪಳ | 3480 |
| | | 30 | ಬಳ್ಳಾರಿ | 2246 |
| | | | **ಒಟ್ಟು** | **207481** |
| ಆ) | ಸ್ವ-ಸಹಾಯ ಸಂಘಗಳ ನೋಂದಾವಣೆಗೆ ಇರುವ ಮಾನದಂಡಗಳೇನು; | ಸ್ವ-ಸಹಾಯ ಸಂಘಗಳನ್ನು ಯಾವುದೇ ಕಾಯ್ದೆಯಲ್ಲಿ ನೋಂದಣಿ ಮಾಡಲಾಗುವುದಿಲ್ಲ. ಆದರೆ ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ನಬಾರ್ಡ್ ರವರ ಮಾರ್ಗಸೂಚಿಯಂತೆ ಬ್ಯಾಂಕುಗಳಲ್ಲಿ ಸಾಲ ನೀಡಲು ಕೆಲವು ಪ್ರಮುಖ ಮಾನದಂಡಗಳಿದ್ದು ಈ ಕೆಳಗಿನಂತಿರುತ್ತವೆ:<br><br>1. ಸ್ವ-ಸಹಾಯ ಸಂಘಗಳು ಕನಿಷ್ಠ 6 ತಿಂಗಳಿಂದಲೂ ಲೆಕ್ಕಪತ್ರಗಳನ್ನು ನಿರ್ವಹಿಸುತ್ತಿರಬೇಕು.<br><br>2. ಸ್ವ-ಸಹಾಯ ಸಂಘಗಳು ಪಂಚಸೂತ್ರಗಳನ್ನು ಪಾಲಿಸಬೇಕು. ಇದರಲ್ಲಿ ನಿಯಮಿತ ಸಭೆಗಳು, ನಿಯಮಿತ ಉಳಿತಾಯ, ಪರಸ್ಪರ ಸಾಲ, ಸಕಾಲಿಕ ಮರುಪಾವತಿ ಮತ್ತು ನವೀಕೃತ ಖಾತೆ ಪುಸ್ತಕಗಳು ಸೇರಿದೆ.<br><br>3. ಸ್ವ-ಸಹಾಯ ಗುಂಪು 10-20 ಸದಸ್ಯರನ್ನು ಹೊಂದಿರಬೇಕು. ಆದರೆ, ವಿಶೇಷ ಸ್ವ-ಸಹಾಯ ಸಂಘಗಳಿಗೆ ಅಂದರೆ, ದೂರದ ಪ್ರದೇಶಗಳಲ್ಲಿ ಅಂಗವಿಕಲರೊಂದಿಗೆ ಅಥವಾ ಕಷ್ಟಕರ ಪ್ರದೇಶಗಳಲ್ಲಿ ಕನಿಷ್ಠ ಸದಸ್ಯರ ಸಂಖ್ಯೆ 5 ಆಗಿರಬಹುದು.<br><br>4. ಸ್ವ- ಸಹಾಯ ಗುಂಪಿನ ಎಲ್ಲಾ ಸದಸ್ಯರು ಬಡವರು ಅಥವಾ ಒಂದೇ ಆರ್ಥಿಕ ಹಿನ್ನಲೆ ಇರುವವರು.<br><br>5. ಸ್ವ-ಸಹಾಯ ಗುಂಪು ಪ್ರತಿವಾರ/ ಹದಿನೈದು/ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ಸೇರುತ್ತಿರಬೇಕು. ಸ್ವ-ಸಹಾಯ ಗುಂಪು ಪ್ಯಾಕ್ಸ್‌ನಲ್ಲಾಗಲಿ ಅಥವಾ ಬ್ಯಾಂಕ್‌ನಲ್ಲಾಗಲಿ ತನ್ನ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿದ್ದು, ಕ್ರಮಬದ್ಧವಾಗಿ ವ್ಯವಹಾರ ನಡೆಸುತ್ತಿರಬೇಕು.<br><br>6. ಸ್ವ-ಸಹಾಯ ಗುಂಪಿನ ಹಾಜರಾತಿ ಅಂದರೆ ಗುಂಪಿನ ಸಭೆಯಲ್ಲಿ ಸದಸ್ಯರ ಹಾಜರಾತಿಯು ಶೇ.95% ರಿಂದ 100% ಇರತಕ್ಕದ್ದು.<br><br>7. ಸ್ವ-ಸಹಾಯ ಗುಂಪಿನಲ್ಲಿ ಅವರ ಸ್ವಂತ ಉಳಿತಾಯ ಖಾತೆಯಲ್ಲಿ ಆಂತರಿಕ ಸಾಲ ನಡೆಯುತ್ತಿರಬೇಕು ಮತ್ತು ಸಾಲದ ಮರುಪಾವತಿ (ಅಸಲು+ಬಡ್ಡಿ) ಶೇ.100% ರಷ್ಟು ಇರತಕ್ಕದ್ದು.<br><br>8. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್/ಪ್ಯಾಕ್ಸ್‌ನಿಂದ ಪಡೆದ ಸಾಲವನ್ನು ನಿಯಮಿತವಾಗಿ ಮರುಪಾವತಿ | | |

| | | |
|---|---|---|
| | | ಮಾಡುವ ಮಾನಸಿಕ ಬದ್ಧತೆಯನ್ನು ಹೊಂದಿರಬೇಕು.<br><br>9. ಅವಧಿ ಸಾಲಕ್ಕೆ ಗುಂಪಿನ ಸದಸ್ಯರುಗಳ ಹೂಡಿಕೆಯನ್ನು ಅನುಸರಿಸಿ ಸಾಲದ ಉದ್ದೇಶವನ್ನು ಅನುಸರಿಸಿ ಸಾಲದ ಅವಧಿಯನ್ನು ನಿಗದಿಪಡಿಸಬಹುದಾಗಿರುತ್ತದೆ.<br><br>10. ದುಡಿಯುವ ಬಂಡವಾಳ ಸಾಲಕ್ಕೆ ನೀಡುವ ಸಾಲದ ಅವಧಿಯು ಒಂದು ವರ್ಷವಿದ್ದು, ನವೀಕರಿಸಲು ಅವಕಾಶವಿರುತ್ತದೆ.<br><br>11. ಗುಂಪಿನ ಸದಸ್ಯರುಗಳು ಬ್ಯಾಂಕಿನ ಉಳಿತಾಯ ಖಾತೆಯನ್ನು ಗುಂಪಿನ ಹೆಸರಲ್ಲಿಟ್ಟು, ಪ್ರತಿನಿಧಿ 1 ಮತ್ತು 2 ಇವರಿಗೆ ಜವಾಬ್ದಾರಿ ನೀಡುವುದು.<br><br>12. ಸಂಘದ ಉಳಿತಾಯ, ಸಾಲ ವಿತರಣೆ ವ್ಯವಹಾರ ಹಾಗೂ ಸಂಘದ ಸಭಾ ನಿರ್ಣಯಕ್ಕೆ ಸಂಬಂದಿಸಿದ ಎಲ್ಲಾ ದಾಖಲೆಗಳನ್ನು ಇಟ್ಟು, ಸದರಿ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಒಳಪಡಿಸತಕ್ಕದ್ದು.<br><br>13. ಒಂದು ಗುಂಪಿನಲ್ಲಿ ಒಂದು ಕುಟುಂಬದ ಒಬ್ಬರು ಮಾತ್ರ ಸದಸ್ಯರಿರಬೇಕು. |
| ಇ) | ಉಳಿತಾಯ ಅಲ್ಲದೇ ಬೇರೆ ಯಾವ ವೃತ್ತಿಯಲ್ಲಿ ಈ ಸ್ವ-ಸಹಾಯ ಸಂಘಗಳು ತೊಡಗಿವೆ? (ವಿವರ ನೀಡುವುದು) | ಸ್ವ-ಸಹಾಯ ಸಂಘಗಳು ಉಳಿತಾಯ ಅಲ್ಲದೇ ಹಪ್ಪಳ, ಉಪ್ಪಿನಕಾಯಿ ಹಾಗೂ ಮಸಾಲೆ ಪುಡಿ ತಯಾರಿಕೆ, ಸಿಹಿ ತಿಂಡಿ ತಯಾರಿಕೆ, ಮಣ್ಣಿನ ಮಡಿಕೆ ತಯಾರಿಕೆ, ಮೆಣಸಿನಹಿಟ್ಟು ತಯಾರಿಕೆ, ಹೂವು, ಹಣ್ಣು, ತರಕಾರಿ ವ್ಯಾಪಾರ, ಹೈನುಗಾರಿಕೆ, ಅರಣ್ಯೋತ್ಪಾದನೆಯ ಗುಡಿ ಕೈಗಾರಿಕೆ, ಕ್ಯಾಟರಿಂಗ್, ಅಡಿಕೆ ಹಾಳೆ ತಟ್ಟೆ ತಯಾರಿಕೆ, ಟೈಲರಿಂಗ್, ಗಂಧದಕಡ್ಡಿ ತಯಾರಿಕೆ, ಗುಡಿ ಕೈಗಾರಿಕೆ, ಮಲ್ಲಿಗೆ ಕೃಷಿ, ಮೀನುಗಾರಿಕೆ, ಸಿದ್ಧ ಉಡುಪುಗಳ ತಯಾರಿಕೆ ಇತ್ಯಾದಿಯಂತಹ ವೃತ್ತಿಯಲ್ಲಿ ತೊಡಗಿಸಿಕೊಂಡಿವೆ. |

**ಸಂಖ್ಯೆ: ಸಿಒ 305 ಸಿಎಲ್ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು